**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 05.06.2021.

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 153/2021 ಕಲಂ: 188, 269, ಐಪಿಸಿ, ಮತ್ತು ಕಲಂ; 87 ಕೆ.ಪಿ ಆ್ಯಕ್ಟ್**

ದಿನಾಂಕ 04.06.2021 ರಂದು 20:00 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಲೋಹಿತ ಲಕ್ಷ್ಮಣ ಕನ್ನೊಳ್ಳಿ. 2) ಪರಶುರಾಮ ಭಾಸ್ಕರ ಬೂದಿಹಾಳ. 3) ಪ್ರವೀಣ ಮಲ್ಲಪ್ಪ ವಠಾರ. 4) ಸಾಗರ ಲಕ್ಷ್ಮಣ ಕನ್ನೋಳಿ ಸಾ; ಎಲ್ಲರೂ ಓತಿಹಾಳ ತಾ; ಸಿಂದಗಿ.5) ಬಸವಂತ್ರಾಯ ತಂದೆ ಕಾಶೀರಾಯ ಏವೂರ. ಸಾ; ಬೂದಿಹಾಳ ಪಿ.ಎಚ್. ತಾ: ಸಿಂದಗಿ, ಇವರು ಸಧ್ಯ ಕರೋನಾ (ಕೋವಿಡ್–19) ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿದ್ದರಿಂದ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದನ್ವಯ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಜಿಲ್ಲೆಯಾದ್ಯಂತ ಸಾರ್ವಜನಿಕರು ಗುಂಪು, ಗುಂಪಾಗಿ ಕೂಡದಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಮತ್ತು ಅಂಗಡಿ, ಹೊಟೇಲ, ದಾಬಾ ಬಂದ್ ಮಾಡಿ ಲಾಕ್‌ಡೌನ್ ಆದೇಶ ಮಾಡಿದ್ದರೂ ಸಹೀತ ಮೇಲೆ ನಮೂದ ಮಾಡಿದ ಆರೋಪಿತರು ಮಾನ್ಯ ಕನಾಟಕ ರಾಜ್ಯ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಗುಂಪಾಗಿ ಕುಳಿತರೆ ಸಾಂಕ್ರಾಮಿಕ ರೋಗವು ಹರಡುವ ಸಂಭವ ಇದೆ ಅಂತ ಗೊತ್ತಿದ್ದು ತಿಳಿದು, ತಿಳಿದು ದಿನಾಂಕ 04.06.2021 ರಂದು 17:30 ಗಂಟೆಗೆ ಬೂದಿಹಾಳ ಪಿ.ಎಚ್. ಗ್ರಾಮದ ಉದಂಡಸಾಬ ದರ್ಗಾದ ಮುಂದಿನ ಕಟ್ಟೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಗುಂಪಾಗಿ ಕುಳಿತುಕೊಂಡು ತಮ್ಮ ತಮ್ಮ ಫಾಯಿದೆಗೊಸ್ಕರ ಹಣವನ್ನು ಪಣಕ್ಕೆ ಹಚ್ಚಿ ಇಸ್ಪೇಟ್ ಎಲೆಗಳ ಸಹಾಯದಿಂದ ಅಂದರ–ಬಾಹರ ಅನ್ನುವ ಇಸ್ಪೇಟ ಜೂಜಾಟ ಆಡುತಿದ್ದಾಗ ಸಲಕರಣೆಗಳ ಸಮೇತ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಎಸ್. ಎಚ್. ಹೊಸಮನಿ ಪಿ.ಎಸ್.ಐ ಸಿಂದಗಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 04.06.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 53/2021 ಕಲಂ–188.269 ಐಪಿಸಿ ಮತ್ತು 15(ಎ).32(3) ಕೆ.ಇ.ಆಕ್ಟ್**

ದಿನಾಂಕ 04.06.2021 ರಂದು 18.45 ಗಂಟೆಗೆ. ಸುಮಾರಿಗೆ ಇದರಲ್ಲಿ ಆರೋಪಿತನಾದ ಭೀಮರಾಯ ಚಂದಪ್ಪ ಹೊನಗೊಂಡ ಸಾ: ಅಂಜುಟಗಿ ತಾ: ಇಂಡಿ ಇತನು ಸರ್ಕಾರವು ಅಗತ್ಯ ವಸ್ತುಗಳ ಪೂರೈಕೆಯ ಸಲುವಾಗಿ ದಿನಸಿ ಮತ್ತು ಇತರೆ ಅಂಗಡಿಗಳನ್ನು ತಗೆಯಲು ನಿಗಧಿ ಪಡಿಸಿದ ವೇಳೆಯನ್ನು ಉಲ್ಲಂಘನೆ ಮಾಡಿ ತನ್ನ ಬಾಬಾತ್ತ ಇರುವ ಹೊಟೇಲ್ ನ್ನು ತೆರೆದುಕೊಂಡು ಸಾರ್ವಜನಿಕರಿಗೆ ಪ್ರಾಣಾಪಯಕಾರಿಯಾದ ಕರೋನಾ ಎಂಬ ರೋಗವನ್ನು ಹರಡಿಸುವ ಉದ್ದೇಶದಿಂದ ತನಗೆ ಸರಕಾರದಿಂದ ಯಾವುದೇ ಅನುಮತಿ ಪರವಾನಿಗೆ ಪಡೆಯದೇ ತನ್ನ ಪಾಯ್ದೇಗೋಸ್ಕರ್ ಇಂಡಿ ತಾಲೂಕಿನ ಅಂಜುಟಗಿ ಗ್ರಾಮದ ತನ್ನ ಬಾಬತ್ತ ಇರುವ ಹೋಟೆಲದಲ್ಲಿ ಅನದೀಕೃತವಾಗಿ ಸಾರ್ವಜನಿಕರಿಗೆ ಶೇರೆ ಕುಡಿಯಲು ಅವಕಾಶ ಮಾಡಿ ಕೊಟ್ಟಿದ್ದು ಅಲ್ಲದೇ ಮಾನ್ಯ ಕರ್ನಾಟಕ ರಾಜ್ಯ ಸರ್ಕಾರದ ಲಾಕ್ ಡೌನ್ ನಿಯಮ ಉಲ್ಲಂಘನೆ ಮಾಡಿದ್ದು ಇರುತ್ತದೆ. ಈ ಬಗ್ಗೆ ಎಸ್.ಎಸ್.ಗಿರಿಸಾಗರ ಎಚ್.ಸಿ–1521 ಝಳಕಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 04.06.2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಆದರ್ಶನಗರ ಪೊಲೀಸ ಠಾಣೆ ಗುನ್ನಾ. ನಂ: 36/2021 ಕಲಂ: 188, 269 ಐ.ಪಿ.ಸಿ.**

ದಿನಾಂಕ 04.06.2021 ರಂದು 12.10 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತನಾದ ಗೋಪಾಲ ಶಿವರಾಮ ಝೂಟ್, ಸಾ॥ ಸೊಲಾಪುರ ರೋಡ್, ಎಮ್.ಬಿ.ಪಾಟೀಲ್ ನಗರ, ವಿಜಯಪುರ ಇವನು ಡಾಕಾ ಗ್ರಾನೈಟ್ ಅಂಗಡಿಯನ್ನು ತೆರೆದು ಗ್ರಾಹಕರಿಗೆ ಗ್ರಾನೈಟ್ ಮಾರಾಟ ಮಾಡಿ ಮಾನ್ಯ ರಾಜ್ಯ ಸರ್ಕಾರ ರವರು ಕೋರೋನಾ ವೈರಸ್/ಕೊವಿಡ್–19 [ಎರಡನೇಯ ಅಲೆ] ಪ್ರಕರಣಗಳು ಸಾಂಕ್ರಾಮಿಕ ರೋಗ ಗ್ರಾಹಕರಿಗೆ ಒಬ್ಬರಿಂದ ಒಬ್ಬರಿಗೆ ಹರಡದಂತೆ ಮುಂಜಾಗೃತಾ ಕ್ರಮವಾಗಿ ಹೊರಡಿಸಿದ ಲಾಕ್–ಡೌನ ಆದೇಶವನ್ನು ಉಲ್ಲಂಘನೆ ಮಾಡಿದವನ ವಿರುದ್ದ ಸೂಕ್ತ ಕ್ರಮಕ್ಕಾಗಿ ಪಿ.ಎಸ್.ಐ ಆದರ್ಶ ನಗರ ಪೊಲೀಸ್ ಠಾಣೆ ರವರು ವರದಿ ಸಲ್ಲಿಸಿರುತ್ತಾರೆ. ಕಾರಣ ಪಿ.ಎಸ್.ಐ [ಕಾ&ಸು] ಆದರ್ಶ ನಗರ ಪೊಲೀಸ್ ಠಾಣೆ ರವರ ವರದಿ ಪರಿಶೀಲಿಸಲಾಗಿ ಕರ್ನಾಟಕ ರಾಜ್ಯ ಸರ್ಕಾರದ ಸಾಂಕ್ರಾಮಿಕ ರೋಗ ನಿರ್ವಹಣಾ ಕಾಯ್ದೇ ಆದೇಶವನ್ನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ತಿಳಿದು ಬಂದಿರುವುದರಿಂದ ಸದರಿ ಆರೋಪಿತನ ಮೇಲೆ ಕ್ರಿಮಿನಲ್ ಮೊಕದ್ದೆಮೆ ದಾಖಲಿಸಿದ್ದು ಇರುತ್ತದೆ. ಈ ಬಗ್ಗೆ ಅನೀಲ ಕುಮಾರ ಕಲ್ಯಾಣಪ್ಪ ಬಿರಾದಾರ ಆರೋಗ್ಯ ನಿರೀಕ್ಷಕರು ಮಹಾನಗರ ಪಾಲಿಕೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 04.06.2021 ರಂದು ಆದರ್ಶನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.